# CBSE Class 10 Kannada 2026-27

## Sample Paper with Solutions

Conducted by the Central Board of Secondary Education (CBSE)

**Time Allowed: 3 hours** **Maximum Marks: 80**

### General Instructions

(i) ಈ ಪ್ರಶ್ನೆಪತ್ರಿಕೆಯಲ್ಲಿ ಒಟ್ಟು **15** ಮುಖ್ಯ ಪ್ರಶ್ನೆಗಳಿರುತ್ತವೆ.

(ii) ಈ ಪ್ರಶ್ನೆ ಪತ್ರಿಕೆಯು **PART – 1 & PART – 2** ಎಂಬ ಎರಡು ಭಾಗಗಳನ್ನು ಮತ್ತು **A B C D** ಎಂಬ ನಾಲ್ಕು ವಿಭಾಗಗಳನ್ನು ಒಳಗೊಂಡಿರುತ್ತವೆ.

(iii) **PART – 1 SECTION -A** ವಿಭಾಗದಲ್ಲಿ ಒಟ್ಟು **4** ಮುಖ್ಯ ಪ್ರಶ್ನೆಗಳು, **10** ಬಹು ಆಯ್ಕೆಯ ಉಪ-ಪ್ರಶ್ನೆಗಳು ಮತ್ತು **10** ಬರವಣಿಗೆಯ ಉಪ ಪ್ರಶ್ನೆಗಳಿರುತ್ತವೆ.

(iv) **PART – 1 SECTION -B** ಅನ್ವಯಿಕ ವ್ಯಾಕರಣದಲ್ಲಿ **10** ಬಹು ಆಯ್ಕೆಯ ಉಪ ಪ್ರಶ್ನೆಗಳು, **5** ಬರವಣಿಗೆಯ ಉಪ ಪ್ರಶ್ನೆಗಳು ಮತ್ತು ಪಠ್ಯಪೂರಕ ಅಧ್ಯಯನದ **5** ಬಹು ಆಯ್ಕೆ ಉಪ ಪ್ರಶ್ನೆಗಳಿಗೆ ಉತ್ತರಿಸಬೇಕು.

(v) **PART – 2 SECTION - C** (ಬರವಣಿಗೆ ಕೌಶಲ್ಯ) ವಿಭಾಗದಲ್ಲಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕು.

(vi) **PART – 2 SECTION - D** (ಗದ್ಯ/ಪದ್ಯ/ಪಠ್ಯಪೂರಕ ಅಧ್ಯಯನ) ಈ ವಿಭಾಗದಲ್ಲಿರುವ **11** ರಿಂದ **15** ಮುಖ್ಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಯಂತೆ ಉತ್ತರಿಸಬೇಕು.

(vii) **PART – 1** (**40** ಅಂಕಗಳು): ವಾಚನ ಮತ್ತು ಗ್ರಹಿಕಾ ಕೌಶಲ್ಯ **20** ಅಂಕಗಳು, ಅನ್ವಯಿಕ ವ್ಯಾಕರಣ **15** ಅಂಕಗಳು, ಪಠ್ಯಪೂರಕ ಅಧ್ಯಯನ **05** ಅಂಕಗಳು.

(viii) **PART – 2** (**40** ಅಂಕಗಳು): ಬರವಣಿಗೆ ಕೌಶಲ್ಯ **12** ಅಂಕಗಳು, ಗದ್ಯ/ಪದ್ಯ/ಪಠ್ಯಪೂರಕ ಅಧ್ಯಯನ **28** ಅಂಕಗಳು. ಒಟ್ಟು ಅಂಕಗಳು **80** ಅಂಕಗಳು.

## PART – 1 (40 ಅಂಕಗಳು) · SECTION -A (20 marks)

*(ವಾಚನ ಮತ್ತು ಗ್ರಹಿಕಾ ಕೌಶಲ್ಯ) = 20 ಅಂಕಗಳು.*

**1(I). ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**ಕನ್ನಡ ನಾಡು ನುಡಿ ಎಂದರೆ ಕನ್ನಡಿಗರ ನಾಡು ಮತ್ತು ಅವರ ಭಾಷೆ, ಇದು 2000 ವರ್ಷಗಳಿಗೂ ಹೆಚ್ಚು ಇತಿಹಾಸ ಹೊಂದಿದ್ದು, ಶ್ರೀಗಂಧದ ಕಂಪಿನ ನಾಡು, ಕಾವೇರಿ ಹುಟ್ಟಿನ ನಾಡು, ಪಂಪ-ರನ್ನರ ಕವಿವಾಣಿಯ ನಾಡು, ಬಸವೇಶ್ವರರ ನಾಡು ಮತ್ತು ಕಲೆ, ಶಿಲ್ಪಗಳ ಬೀಡು ಎಂದೇ ಪ್ರಸಿದ್ಧವಾಗಿದೆ, ಇದು ಕೇವಲ ಭಾಷೆಯಲ್ಲ, ನಮ್ಮ ಸಂಸ್ಕೃತಿ, ಅಸ್ಮಿತೆ, ಮತ್ತು ಉಸಿರಾಗಿದೆ. ಕರ್ನಾಟಕ ಎಂಬ ಹೆಸರು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಇದನ್ನು ಕರುನಾಡು ಎಂದು ಕರೆಯುತ್ತಿದ್ದರು. ಕರ್ ನಾಡು ಅಂದರೆ ಕಪ್ಪುಮಣ್ಣಿನ ನಾಡು ಎಂದರ್ಥ. ತಮಿಳಿನ 'ಶಿಲಪ್ಪದಿಕಾರಂ' ಪ್ರಾಚೀನ ಕೃತಿಯಲ್ಲಿ 'ಕರುನಾಟ್' ಎಂಬ ಶಬ್ದದಿಂದ ಕರ್ನಾಟಕ ಎಂದು ಕರೆದಿರುವುದು ತಿಳಿದುಬರುತ್ತದೆ. ಕರುನಾಟ್ ಎಂದರೆ ಉನ್ನತ ಅಥವಾ ಎತ್ತರದಲ್ಲಿರುವ ನಾಡು ಎಂದರ್ಥ. ಇದು ಹಿಂದೆ ಕನ್ನಡನಾಡು ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೂ ಹಬ್ಬಿತ್ತೆಂದು ನೃಪತುಂಗನ ಆಸ್ಥಾನಿಕ ಕವಿ ಶ್ರೀವಿಜಯನ ಅಲಂಕಾರ ಗ್ರಂಥ ಕವಿರಾಜಮಾರ್ಗದಲ್ಲಿ ಉಲ್ಲೇಖಿಸಲಾಗಿದೆ. ಸ್ವಾತಂತ್ರ್ಯ ನಂತರ ಭಾರತವನ್ನು ಅನೇಕ ರಾಜ್ಯಗಳನ್ನಾಗಿ ವಿಂಗಡಿಸಲಾಯಿತು. ಮೈಸೂರು ಅರಸರ ಒಡೆತನದಲ್ಲಿದ್ದ ದಕ್ಷಿಣದ 9 ಜಿಲ್ಲೆಗಳನ್ನೊಳಗೊಂ 1953ರಲ್ಲಿ 'ಮೈಸೂರು ರಾಜ್ಯ' ವು ಉದಯವಾಯಿತು.**

**ಅನಂತರ ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಿಸುವಾಗ ಬಾಂಬೆ, ಹೈದರಾಬಾದ್, ಮದ್ರಾಸ್ ಹಾಗೂ ಕೊಡಗು ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದ ಕನ್ನಡ ಭಾಷೆ ಮಾತನಾಡುವ ಜನರ ಪ್ರದೇಶಗಳನ್ನು ಒಟ್ಟಾಗಿ ಸೇರಿಸಿದ್ದರಿಂದ 1956 ರ ನವೆಂಬರ್ ಒಂದರಂದು 'ವಿಶಾಲ ಮೈಸೂರು ರಾಜ್ಯ' ಅಸ್ತಿತ್ವಕ್ಕೆ ಬಂದಿತು. ಇದರ ಸವಿನೆನಪಿಗಾಗಿ ಪ್ರತಿವರ್ಷ ನವೆಂಬರ್ ತಿಂಗಳಲ್ಲಿ ರಾಜ್ಯೋತ್ಸವವನ್ನು ಆಚರಿಸಲಾಗುತ್ತಿದೆ. ಕನ್ನಡಿಗರ ಅಭಿಲಾಷೆಯಂತೆ ನಮ್ಮ ರಾಜ್ಯವನ್ನು 'ಕರ್ನಾಟಕ' ಎಂದು 1973 ನವೆಂಬರ್ ಒಂದರಂದು ಮರುನಾಮಕರಣ ಮಾಡಲಾಯಿತು.**

**ಇಂದು ನಮ್ಮ ರಾಜ್ಯದಲ್ಲಿ 31 ಜಿಲ್ಲೆಗಳಿವೆ. ಈ ಜಿಲ್ಲೆಗಳಲ್ಲಿ ಒಟ್ಟು 227 ತಾಲ್ಲೂಕುಗಳು, 745 ಹೋಬಳಿಗಳು, 347 ಪಟ್ಟಣ-ನಗರಗಳು, 29483 ಹಳ್ಳಿಗಳಿವೆ. ಬೆಳಗಾವಿ ಜಿಲ್ಲೆ ವಿಸ್ತೀರ್ಣದಲ್ಲಿ ಅತಿ ದೊಡ್ಡದು ಹಾಗೂ ಬೆಂಗಳೂರು ನಗರ ಅತಿ ಚಿಕ್ಕ ಜಿಲ್ಲೆಯಾಗಿದೆ. ಬೆಂಗಳೂರು ಕರ್ನಾಟಕದ ರಾಜಧಾನಿ. ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ; ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳು.**

**ಮೇಲಿನ ವಾಕ್ಯವೃಂದವನ್ನು ಆಧರಿಸಿ, ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1953ರಲ್ಲಿ ಮೈಸೂರು ರಾಜ್ಯ ಉದಯವಾದಾಗ ಇದ್ದ ಜಿಲ್ಲೆಗಳು** [1 mark]

(A) ಎಂಟು

(B) ಒಂಭತ್ತು

(C) ಹತ್ತು

(D) ಹದಿನೈದು

**Correct Answer:** (B) ಒಂಭತ್ತು

**Solution:**

**Concept:**

- The question asks how many districts the Mysore State had when it was formed in 1953.
- This is a fact question, so the answer must come straight from the passage.

**Step 1:** Find the line in the passage In the first paragraph we read: "ಮೈಸೂರು ಅರಸರ ಒಡೆತನದಲ್ಲಿದ್ದ ದಕ್ಷಿಣದ 9 ಜಿಲ್ಲೆಗಳನ್ನೊಳಗೊಂಡು 1953ರಲ್ಲಿ 'ಮೈಸೂರು ರಾಜ್ಯ' ವು ಉದಯವಾಯಿತು".
That means the state was formed from 9 districts of the south that belonged to the Mysore kings.
The Kannada word for 9 is ಒಂಭತ್ತು.

**Step 2:** Why the other options are wrong (A) ಎಂಟು means 8. The passage never gives this number.
(C) ಹತ್ತು means 10. This is one more than the number in the passage.
(D) ಹದಿನೈದು means 15. The passage does not say this either.
Do not confuse this with the 31 districts of Karnataka today, which is a later figure.

**Step 3:** Conclusion The passage says 9 districts, so the correct option is (B) ಒಂಭತ್ತು.

**Quick Tip to Solve:** Look for the year 1953 in the first paragraph and read the number of districts given next to it.

**1(II). ಕರುನಾಡು ಎಂಬುದನ್ನು ಹೀಗೂ ಕರೆಯಬಹುದು.** [1 mark]

(A) ಕಪ್ಪು ಮಣ್ಣಿನ ನಾಡು

(B) ಕೆಂಪು ಮಣ್ಣಿನ ನಾಡು

(C) ಜೇಡಿ ಮಣ್ಣಿನ ನಾಡು

(D) ಹವಳದ ನಾಡು

**Correct Answer:** (A) ಕಪ್ಪು ಮಣ್ಣಿನ ನಾಡು

**Solution:**

**Concept:**

- We must pick the meaning of the word ಕರುನಾಡು given in the passage.
- The word is split as ಕರು + ನಾಡು, where ಕರು (ಕರ್) points to black and ನಾಡು means land.

**Step 1:** Find the line in the passage The passage says: "ಕರ್ ನಾಡು ಅಂದರೆ ಕಪ್ಪುಮಣ್ಣಿನ ನಾಡು ಎಂದರ್ಥ."
So ಕರುನಾಡು means the land of black soil, which is option (A) ಕಪ್ಪು ಮಣ್ಣಿನ ನಾಡು.

**Step 2:** Why the other options are wrong (B) ಕೆಂಪು ಮಣ್ಣಿನ ನಾಡು means land of red soil. The passage speaks of black soil, not red.
(C) ಜೇಡಿ ಮಣ್ಣಿನ ನಾಡು means land of clay. The passage never uses this meaning.
(D) ಹವಳದ ನಾಡು means land of coral. This has no link with the word ಕರುನಾಡು.
The other meaning given in the passage is ಉನ್ನತ ಅಥವಾ ಎತ್ತರದಲ್ಲಿರುವ ನಾಡು (a high land), which is for the word ಕರುನಾಟ್, and it is not among the options.

**Step 3:** Conclusion ಕರುನಾಡು means the land of black soil, so the correct option is (A).

**Quick Tip to Solve:** Find the sentence in the passage that explains the word ಕರ್ ನಾಡು.

**1(III). ಕನ್ನಡ ಭಾಷೆ ಈ ಪ್ರಾಂತ್ಯಗಳಲ್ಲಿ ಹಂಚಿ ಹೋಗಿತ್ತು.** [1 mark]

(A) ಬಾಂಬೆ, ಬಂಗಾಳ

(B) ಕೊಡಗು, ಹೈದರಾಬಾದ್

(C) ಮದ್ರಾಸ್, ತಿರುವನಂತಪುರಂ

(D) ಬಂಗಾಳ, ಕೊಡಗು

**Correct Answer:** (B) ಕೊಡಗು, ಹೈದರಾಬಾದ್

**Solution:**

**Concept:**

- The question asks which provinces the Kannada-speaking regions were scattered across before the state was united.
- We need the line about this in the second paragraph.

**Step 1:** Find the line in the passage The second paragraph says: "ಬಾಂಬೆ, ಹೈದರಾಬಾದ್, ಮದ್ರಾಸ್ ಹಾಗೂ ಕೊಡಗು ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದ ಕನ್ನಡ ಭಾಷೆ ಮಾತನಾಡುವ ಜನರ ಪ್ರದೇಶಗಳನ್ನು".
So the four provinces are Bombay, Hyderabad, Madras and Kodagu.

**Step 2:** Check each option against the four names (A) ಬಾಂಬೆ, ಬಂಗಾಳ: Bombay is correct but Bengal is not in the passage, so this is wrong.
(B) ಕೊಡಗು, ಹೈದರಾಬಾದ್: both Kodagu and Hyderabad are in the list, so this is right.
(C) ಮದ್ರಾಸ್, ತಿರುವನಂತಪುರಂ: Madras is correct but Thiruvananthapuram is not named, so this is wrong.
(D) ಬಂಗಾಳ, ಕೊಡಗು: Bengal is not named, so this is wrong.

**Step 3:** Conclusion Both names in option (B) appear in the passage, so the answer is (B) ಕೊಡಗು, ಹೈದರಾಬಾದ್.

**Quick Tip to Solve:** Read the second paragraph and list the four provinces it names, then test each option.

**1(IV). ಕರ್ನಾಟಕ ಎಂದು ಪದವನ್ನು ಈ ಕೃತಿಯಿಂದ ಸ್ವೀಕರಿಸಲಾಗಿದೆ.** [1 mark]

(A) ಕವಿರಾಜಮಾರ್ಗ

(B) ಹಲ್ಮಿಡಿ ಶಾಸನ

(C) ಪಂಪ-ರನ್ನರ ಕವಿವಾಣಿ

(D) ತಮಿಳಿನ 'ಶಿಲಪ್ಪದಿಕಾರಂ'

**Correct Answer:** (D) ತಮಿಳಿನ 'ಶಿಲಪ್ಪದಿಕಾರಂ'

**Solution:**

**Concept:**

- The question asks from which work the word ಕರ್ನಾಟಕ was taken.
- Two works are named in the first paragraph, so we must see which one is linked with this word.

**Step 1:** Find the line in the passage The passage says: "ತಮಿಳಿನ 'ಶಿಲಪ್ಪದಿಕಾರಂ' ಪ್ರಾಚೀನ ಕೃತಿಯಲ್ಲಿ 'ಕರುನಾಟ್' ಎಂಬ ಶಬ್ದದಿಂದ ಕರ್ನಾಟಕ ಎಂದು ಕರೆದಿರುವುದು ತಿಳಿದುಬರುತ್ತದೆ."
So the name Karnataka is seen in the ancient Tamil work Shilappadikaram.

**Step 2:** Why the other options are wrong (A) ಕವಿರಾಜಮಾರ್ಗ is mentioned only to say that the Kannada land spread from the Kaveri to the Godavari. It is not given as the source of the word.
(B) ಹಲ್ಮಿಡಿ ಶಾಸನ (the Halmidi inscription) is not mentioned in the passage at all.
(C) ಪಂಪ-ರನ್ನರ ಕವಿವಾಣಿ is named only as a sign of the poetic fame of the land.

**Step 3:** Conclusion The passage links the word with the Tamil work Shilappadikaram, so the answer is (D).

**Quick Tip to Solve:** Find the sentence that names an ancient work together with the word ಕರುನಾಟ್ or ಕರ್ನಾಟಕ.

**1(V). ಈ ಕೆಳಗಿನ ಹೇಳಿಕೆಗಳನ್ನು ಗುರುತಿಸಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**
**ಹೇಳಿಕೆ : ೧ ಕನ್ನಡ ನಾಡುನುಡಿಗೆ ಸುಮಾರು 2000 ವರ್ಷಗಳ ಇತಿಹಾಸವಿದೆ.**
**ಹೇಳಿಕೆ : ೨ ಕರ್ನಾಟಕದಲ್ಲಿ ಬೆಳಗಾವಿ ಜಿಲ್ಲೆ ವಿಸ್ತೀರ್ಣದಲ್ಲಿ ಅತಿ ದೊಡ್ಡದು ಹಾಗೂ ಬೆಂಗಳೂರು ನಗರ ಅತಿ ಚಿಕ್ಕ ಜಿಲ್ಲೆಯಾಗಿದೆ.** [1 mark]

(A) ಹೇಳಿಕೆ –೧ ಮಾತ್ರ ಸರಿಯಾಗಿದೆ.

(B) ಹೇಳಿಕೆ –೨ ಮಾತ್ರ ಸರಿಯಾಗಿದೆ.

(C) ಹೇಳಿಕೆ-೧ ಮತ್ತು ಹೇಳಿಕೆ –೨ ಎರಡೂ ಹೇಳಿಕೆಗಳು ಸರಿಯಾಗಿವೆ.

(D) ಹೇಳಿಕೆ-೧ ಮತ್ತು ಹೇಳಿಕೆ –೨ ಎರಡೂ ಹೇಳಿಕೆಗಳು ತಪ್ಪಾಗಿವೆ.

**Correct Answer:** (C) ಹೇಳಿಕೆ-೧ ಮತ್ತು ಹೇಳಿಕೆ –೨ ಎರಡೂ ಹೇಳಿಕೆಗಳು ಸರಿಯಾಗಿವೆ.

**Solution:**

**Concept:**

- Two statements are given.
- We must check each one against the passage and then pick the option that describes both correctly.

**Step 1:** Check Statement 1 Statement 1 says that the Kannada land and language have about 2000 years of history.
The first line of the passage says: “ಇದು 2000 ವರ್ಷಗಳಿಗೂ ಹೆಚ್ಚು ಇತಿಹಾಸ ಹೊಂದಿದ್ದು” (it has more than 2000 years of history).
So Statement 1 is TRUE.

**Step 2:** Check Statement 2 Statement 2 says that Belagavi is the largest district by area and Bengaluru city the smallest.
The third paragraph says: “ಬೆಳಗಾವಿ ಜಿಲ್ಲೆ ವಿಸ್ತೀರ್ಣದಲ್ಲಿ ಅತಿ ದೊಡ್ಡದು ಹಾಗೂ ಬೆಂಗಳೂರು ನಗರ ಅತಿ ಚಿಕ್ಕ ಜಿಲ್ಲೆಯಾಗಿದೆ.”
So Statement 2 is also TRUE.

**Step 3:** Pick the option (A) says only Statement 1 is right. This is wrong because Statement 2 is also right.
(B) says only Statement 2 is right. This is wrong because Statement 1 is also right.
(C) says both are right. This matches our checks.
(D) says both are wrong. This is wrong because both are supported by the passage.

**Step 4:** Conclusion Both statements are supported by the passage, so the answer is (C).

**Quick Tip to Solve:** Check each statement against the first and third paragraphs of the passage.

**2(I). ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**ಭೂಮಿಯ ಅಂತರಾಳದಲ್ಲಿನ ಒತ್ತಡ ಒಂದು ಬಿಂದುವಿನಿಂದ ಸ್ಫೋಟಗೊಂಡು ಅದು ಅಲೆಗಳ ರೂಪದಲ್ಲಿ ಬಿಡುಗಡೆ ಪಡೆಯಲು ನೋಡುತ್ತದೆ. ಈ ಅಲೆಗಳೇ ಭೂಕಂಪಕ್ಕೆ ಕಾರಣ. ಈ ಅಲೆಗಳು ಹೊರಡುವ ಕೇಂದ್ರ ಬಿಂದುವಿಗೆ ಭೂಕಂಪದ ಉಗಮ ಕೇಂದ್ರ ಎಂದು ಕರೆಯುತ್ತಾರೆ. ಈ ಉಗಮ ಕೇಂದ್ರ ಮೂರು ರೀತಿಯಲ್ಲಿ ಇರುತ್ತದೆ. ಭೂಮಿಯ ಮೇಲ್ಭರದರಿಂದ 70 ಕಿ. ಮೀ. ಆಳದಲ್ಲಿ ಎಲ್ಲಿಯಾದರೂ ಈ ಬಿಂದುವಿದ್ದರೆ ಅದನ್ನು ಸಾಧಾರಣ ಮೇಲ್ಮೈ ಕೇಂದ್ರವೆಂದು ಕರೆಯುತ್ತಾರೆ. ಈ ಬಿಂದು 70 ರಿಂದ 300 ಕಿ. ಮೀ. ದೂರದ ಯಾವುದಾದರೂ ಸ್ಥಳದಲ್ಲಿದ್ದರೆ ಅದನ್ನು ಮಧ್ಯಮ ಕಂಪನ ಕೇಂದ್ರವೆಂದೂ ಮತ್ತು 300 ಕಿ. ಮೀ. ದೂರದ ಆಚೆಗಿನ ಆಳದಲ್ಲಿ ಈ ಬಿಂದುವಿದ್ದರೆ ಅದನ್ನು ಪಾತಾಳ ಕಂಪನ ಕೇಂದ್ರವೆಂದೂ ಕರೆಯುತ್ತಾರೆ. ಈ ಕೇಂದ್ರದ ನೆತ್ತಿಯ ಮೇಲೆ ಭೂಮಿಯ ಹೊರಮೈಯಲ್ಲಿ ಇರುವ ಕೇಂದ್ರವನ್ನು ಉಪಕೇಂದ್ರ (ಎಪಿಸೆಂಟರ್) ಎಂದು ಕರೆಯುತ್ತಾರೆ. ಲಾತೂರು ಮತ್ತು ಉಸ್ಮಾನಾಬಾದ್ ಜಿಲ್ಲೆಗಳಲ್ಲಾದ ಭೂಕಂಪದ ಉಪಕೇಂದ್ರ ಕಿಲ್ಲಾರಿಯ ಬಳಿ ಇತ್ತು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.**

**ಆದರೆ ಮನುಷ್ಯನ ಸ್ವಭಾವ ಬಹಳ ವಿಚಿತ್ರವಾದದ್ದು. ಅಪಾಯ ತನ್ನ ಬೆನ್ನಿಗೇ ಇದ್ದ ಸದಾ ಪಹರೆ ಕಾಯುತ್ತ ಗಬಕಾಯಿಸಲು ಹೊಂಚುಹಾಕಿ ನಿಂತಿದ್ದರೂ ಈ ಮನುಷ್ಯನ ಬದುಕುವ ಹಠ, ಜೀವನೋತ್ಸಾಹ ಮತ್ತು ಜೀವನ ಪ್ರೀತಿಗಳು ಕಡಿಮೆಯಾಗುವುದೇ ಇಲ್ಲ. ಮೇಲುನೋಟಕ್ಕೆ ಮಣ್ಣಿನ ಮುದ್ದೆಯಾಗಿ ಕಾಣುವ ನಮ್ಮ ಈ ಭೂಮಿಯ ಇಡೀ ಗೋಲ ಮಣ್ಣೇ ಆಗಿರುವುದಿಲ್ಲ. ಒಂದಿಷ್ಟು ಆಳಕ್ಕೆ ಹೋದರೆ ಸಾಕು ಈ ಮಣ್ಣು ಮಾಯವಾಗಿ ಮಣ್ಣಿನ ಬದಲು ಗಟ್ಟಿ ಶಿಲೆ ಗೋಚರಿಸುತ್ತದೆ. ಶಿಲೆ ಎಂದರೆ ಶಿಲೆಯೇ ಆಗಿರಬೇಕೆಂದೇನೂ ಇಲ್ಲ, ಪದರ ಪದರ ಶಿಲೆಗಳು ಒಂದರ ಮೇಲೊಂದು ಪದರ. ಪದರದ ಪಕ್ಕ ಪದರ. ಆಳಕ್ಕೆ ಹೋದಂತೆಲ್ಲ ಭೂಮಿಯ ಶಾಖ ಕೂಡ ಹೆಚ್ಚಾಗುತ್ತದೆ. ಈ ಶಾಖ ಹೆಚ್ಚಾದ ಕಡೆಗಳಲ್ಲಿ ಭೂಮಿಯೊಳಗಣ ಶಿಲೆ ಗಟ್ಟಿಯಾಗಿ ಘನರೂಪದಲ್ಲಿರುವ ಬದಲು ದ್ರವ ರೂಪದಲ್ಲೂ ಇರಬಹುದು. ಈ ದ್ರವ ಒತ್ತಡ ಮತ್ತು ಶಾಖಗಳ ಫಲವಾಗಿ ಶಿಲೆಗಳ ನಡುವಿನ ಬಿರುಕುಗಳಿಂದ ಹೊರ ಚಿಮ್ಮಬಹುದು. ಹೀಗೆ ಚಿಮ್ಮಿದ್ದನ್ನು ನಾವು ಜ್ವಾಲಾಮುಖಿ ಎಂದು ಕರೆಯುತ್ತೇವೆ ಶಿಲಾಪದರಗಳು ಗಟ್ಟಿಯಾಗಿ ಘನರೂಪದಲ್ಲಿದ್ದ ಸಂದರ್ಭದಲ್ಲೂ ಭೂಮಿ 'ಸ್ಥಿರ' ಸ್ಥಿತಿಯಲ್ಲೇ ಇರುವುದಿಲ್ಲ. ಭೂಮಿ ತನ್ನ ಮತ್ತು ಸೂರ್ಯನ ಸುತ್ತ ತಿರುಗುತ್ತದೆ ಎಂಬುದನ್ನು ನಾವೆಲ್ಲ ಬಲ್ಲೆವು.**

**ಕೆಳಗಿನ ಪ್ರಶ್ನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರ ಬರೆಯಿರಿ.**

**ಭೂಕಂಪದ ಉಪಕೇಂದ್ರವನ್ನು ವಿಜ್ಞಾನಿಗಳು ಗುರುತಿಸಿದ್ದು** [1 mark]

(A) ಪಾತಾಳದಲ್ಲಿ

(B) ಭೂಮಿಯ ಹೊರಮೈಯಲ್ಲಿ

(C) ಕಿಲ್ಲಾರಿಯ ಬಳಿ

(D) ಮಧ್ಯಮ ಕಂಪನದಲ್ಲಿ

**Correct Answer:** (C) ಕಿಲ್ಲಾರಿಯ ಬಳಿ

**Solution:**

**Concept:**

- The question asks where the scientists found the epicentre of the earthquake that hit Latur and Osmanabad.
- The last sentence of the first paragraph answers this.

**Step 1:** Find the line in the passage The passage says: "ಲಾತೂರು ಮತ್ತು ಉಸ್ಮಾನಾಬಾದ್ ಜಿಲ್ಲೆಗಳಲ್ಲಾದ ಭೂಕಂಪದ ಉಪಕೇಂದ್ರ ಕಿಲ್ಲಾರಿಯ ಬಳಿ ಇತ್ತು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ."
So the epicentre was near Killari, which is option (C) ಕಿಲ್ಲಾರಿಯ ಬಳಿ.

**Step 2:** Why the other options are wrong (A) ಪಾತಾಳದಲ್ಲಿ (deep below) relates to the origin centre of an earthquake that is deeper than 300 km, not to the epicentre.
(B) ಭೂಮಿಯ ಹೊರಮೈಯಲ್ಲಿ says where an epicentre lies in general (on the surface above the origin centre), but the question asks for the place named by the scientists.
(D) ಮಧ್ಯಮ ಕಂಪನದಲ್ಲಿ is a type of origin centre at 70 to 300 km depth, not a place.

**Step 3:** Conclusion The scientists named Killari as the place of the epicentre, so the answer is (C).

**Quick Tip to Solve:** The last sentence of the first paragraph names the place near which the epicentre was found.

**2(II). ಭೂಕಂಪದ ಉಗಮ ಕೇಂದ್ರಗಳು ರೀತಿಯಲ್ಲಿ ಇರುತ್ತದೆ.** [1 mark]

(A) ಐದು

(B) ಮೂರು

(C) ನಾಲ್ಕು

(D) ಎರಡು

**Correct Answer:** (B) ಮೂರು

**Solution:**

**Concept:**

- We need to find in how many ways (types) the origin centres of earthquakes occur, as per the passage.

**Step 1:** Find the line and count The passage says: "ಈ ಉಗಮ ಕೇಂದ್ರ ಮೂರು ರೀತಿಯಲ್ಲಿ ಇರುತ್ತದೆ." (This origin centre is of three kinds.)
The three kinds are then listed: ಸಾಧಾರಣ ಮೇಲ್ಮೈ ಕೇಂದ್ರ (up to 70 km), ಮಧ್ಯಮ ಕಂಪನ ಕೇಂದ್ರ (70 to 300 km) and ಪಾತಾಳ ಕಂಪನ ಕೇಂದ್ರ (beyond 300 km).
So the number is ಮೂರು (three).

**Step 2:** Why the other options are wrong (A) ಐದು (five) and (C) ನಾಲ್ಕು (four) are more than the three kinds listed.
(D) ಎರಡು (two) is less than the three kinds listed.

**Step 3:** Conclusion There are three kinds, so the answer is (B) ಮೂರು.

**Quick Tip to Solve:** Count the kinds of origin centres the passage names, or find the sentence that says the number in words.

**2(III). ಭೂಮಿ ಮತ್ತು ಸೂರ್ಯನ ವಿಷಯದಲ್ಲಿ ನಮಗೆ ತಿಳಿದಿರುವ ವಿಷಯ ಇದಾಗಿದೆ.** [1 mark]

(A) ಸೂರ್ಯನಿಂದ ಭೂಕಂಪವು ಸಂಭವಿಸುತ್ತದೆ.

(B) ಭೂಮಿಯು ತನ್ನ ಮತ್ತು ಸೂರ್ಯನ ಸುತ್ತ ತಿರುಗುತ್ತದೆ.

(C) ಸೂರ್ಯನು ಭೂಮಿಯ ಸುತ್ತ ತಿರುಗುತ್ತದೆ.

(D) ಭೂಮಿಯು ಸೂರ್ಯನ ಸುತ್ತ ಮಾತ್ರ ತಿರುಗುತ್ತದೆ.

**Correct Answer:** (B) ಭೂಮಿಯು ತನ್ನ ಮತ್ತು ಸೂರ್ಯನ ಸುತ್ತ ತಿರುಗುತ್ತದೆ.

**Solution:**

**Concept:**

- The question asks what we know about the earth and the sun, as stated in the passage.

**Step 1:** Find the line in the passage The last line of the second paragraph says: "ಭೂಮಿ ತನ್ನ ಮತ್ತು ಸೂರ್ಯನ ಸುತ್ತ ತಿರುಗುತ್ತದೆ ಎಂಬುದನ್ನು ನಾವೆಲ್ಲ ಬಲ್ಲೆವು."
That is, the earth rotates on its own axis and also goes round the sun. This is option (B).

**Step 2:** Why the other options are wrong (A) says an earthquake is caused by the sun. The passage says the waves from deep inside the earth cause earthquakes.
(C) says the sun goes round the earth. This is the opposite of the passage.
(D) says the earth moves only around the sun. The word ಮಾತ್ರ (only) is wrong, because the earth

also spins about itself.

**Step 3:** Conclusion Option (B) repeats what the passage says, so it is correct.

**Quick Tip to Solve:** Read the last sentence of the second paragraph. Watch out for the word ಮಾತ್ರ in option D.

**2(IV). ಭೂಮಿಯ ಶಾಖದಿಂದ ಶಿಲೆ ಗಟ್ಟಿಯಾಗಿ ಅದರಿಂದ ಚಿಮ್ಮುವ ದ್ರವರೂಪವನ್ನು ಎಂದು ಕರೆಯುವರು.**

[1 mark]

(A) ಪಾದರಸ

(B) ಹಾಲಿನಂತಹ ದ್ರವರೂಪ

(C) ಹಣ್ಣಿನರಸ

(D) ಜ್ವಾಲಾಮುಖಿ

**Correct Answer:** (D) ಜ್ವಾಲಾಮುಖಿ

**Solution:**

**Concept:**

- The question asks for the name of the liquid that shoots out from the cracks between rocks because of the heat and pressure inside the earth.

**Step 1:** Find the line in the passage The passage says that in hot places the rock turns to liquid and spurts out through cracks. Then it says: "ಹೀಗೆ ಚಿಮ್ಮಿದ್ದನ್ನು ನಾವು ಜ್ವಾಲಾಮುಖಿ ಎಂದು ಕರೆಯುತ್ತೇವೆ." So the answer is ಜ್ವಾಲಾಮುಖಿ (volcano, or its lava).

**Step 2:** Why the other options are wrong (A) ಪಾದರಸ means mercury. It is a metal that is liquid at room temperature, and it is not in the passage.
(B) ಹಾಲಿನಂತಹ ದ್ರವರೂಪ means a milk-like liquid. The passage does not say this.
(C) ಹಣ್ಣಿನರಸ means fruit juice. It has no link with the passage.

**Step 3:** Conclusion Option (D) ಜ್ವಾಲಾಮುಖಿ is the term used in the passage.

**Quick Tip to Solve:** Find the sentence that says what we call the liquid that spurts out through the cracks between rocks.

**2(V). ಭೂಕಂಪದ ಉಪಕೇಂದ್ರ ಇರುವ ಜಿಲ್ಲೆಗಳು** [1 mark]

(A) ಲಾತೂರು ಮತ್ತು ಉಸ್ಮಾನಾಬಾದ್ ಜಿಲ್ಲೆ

(B) ಅಹಮದಾಬಾದ್ ಮತ್ತು ಅಮರಾವತಿ

(C) ಪುಣೆ ಮತ್ತು ಮುಂಬೈ

(D) ನಾಗಪುರ ಮತ್ತು ನಾಸಿಕ್

**Correct Answer:** (A) ಲಾತೂರು ಮತ್ತು ಉಸ್ಮಾನಾಬಾದ್ ಜಿಲ್ಲೆ

**Solution:**

**Concept:**

- We must name the districts where the earthquake mentioned in the passage took place.

**Step 1:** Find the line in the passage The passage says: "ಲಾತೂರು ಮತ್ತು ಉಸ್ಮಾನಾಬಾದ್ ಜಿಲ್ಲೆಗಳಲ್ಲಾದ ಭೂಕಂಪದ ಉಪಕೇಂದ್ರ" (the earthquake in the Latur and Osmanabad districts).
So the districts are Latur and Osmanabad.

**Step 2:** Why the other options are wrong (B) Ahmedabad and Amravati, (C) Pune and Mumbai and (D) Nagpur and Nashik are cities and districts that the passage does not mention.

**Step 3:** Conclusion Option (A) ಲಾತೂರು ಮತ್ತು ಉಸ್ಮಾನಾಬಾದ್ ಜಿಲ್ಲೆ is correct.

**Quick Tip to Solve:** Look at the last sentence of the first paragraph. It names two districts.

---

**3(I). ಕೆಳಗೆ ಕೊಟ್ಟಿರುವ ಸಾ ರಾ ಅಬೂಬಕ್ಕರ್ ಅವರು ರಚಿಸಿರುವ 'ಯುದ್ಧ' ಎಂಬ ಪಾಠಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**"ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆಯೆನ್ನು. ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ, ಯುದ್ಧ!" ತಿರಸ್ಕಾರದಿಂದ ನುಡಿದಳು ಮುದುಕಿ.**

**"ಆಗಲೂ ಯುದ್ಧವಾಗಿತ್ತಾ ಅಜ್ಜೀ?" ರಾಹಿಲ್ ಕೇಳಿದನು. "ಹೂಂ...ಆಗ ಈ ಊರು ಆ ದೇಶದವರ ಕೈಯಲ್ಲಿತ್ತು. ಅವರ ಧರ್ಮ ಬೇರೆ ನಮ್ಮ ಧರ್ಮ ಬೇರೆ ಎಂಬ ಕಾರಣಕ್ಕೆ ಆಗ ಯುದ್ಧ ಮಾಡಿದರು. ಸಾವಿರಗಟ್ಟಲೆಯಲ್ಲಿ ಜನರು ಪ್ರಾಣ ತೆತ್ತ ಬಳಿಕ ಯುದ್ಧ ನಿಂತು ಈ ಊರು ಈ ದೇಶಕ್ಕೆ ಸೇರಿತು. ಊರೇನೋ ಕೈ ಬದಲಾಯಿಸಿತು. ಆದರೇನು? ನಮ್ಮ ಬದುಕಿನಲ್ಲೇನಾದರೂ ವ್ಯತ್ಯಾಸವಾಗಿದೆಯೇ?ನಾವು ಬೆವರಿಳಿಸಿ ದುಡಿದಿದ್ದನ್ನು ಈ ಜನರು ಹಲವು ಹೆಸರು ಹೇಳಿ ಹಲವು ಕಾರಣ ನೀಡಿ ದೋಚಿಕೊಂಡು ಹೋಗುತ್ತಾರೆ. ದುಡಿದದ್ದನ್ನೇ ಕೊಂಡು ಹೋದರೆ ಹಾಳಾಗಲಿ ಎಂದು ಸುಮ್ಮನಿರಬಹುದಾಗಿತ್ತು. ಮನೆಯ ಮಕ್ಕಳನ್ನೂ ಯುದ್ಧಕ್ಕೆ ಕರದೊಯ್ಯುತ್ತಾರಲ್ಲಾ? ಇವರ ಮನೆ ಹಾಳಾಗ!" ನೆಲಕ್ಕೆ ಕೈ ಬಡಿದು ಶಪಿಸಿದಳು ಮುದುಕಿ.**

**"ಈಗ ನಿಮ್ಮ ಮಗನೆಲ್ಲಿದ್ದಾನಮ್ಮಾ?" ರಾಹಿಲ್ ಕೇಳಿದನು.**

**"ಯುದ್ಧಕ್ಕೆ ಹೋಗಿದ್ದಾನೆ! ನನ್ನ ಮಗನಿನ್ನೂ ಚಿಕ್ಕ ಹುಡುಗನಾಗಿದ್ದಾಗ ಯುದ್ಧಕ್ಕೆ ಹೋದ ಅವನ ತಂದೆ ಹಿಂತಿರುಗಲಿಲ್ಲ. ಎದೆ ತುಂಬ ಬೂದಿ ಮುಚ್ಚಿದ ಕೆಂಡ, ಎದೆಯ ಗಾಯ ಇಂದಿಗೂ ಇದೆ, ನೋಡು. ಎಲ್ಲ ದುಃಖ ನುಂಗಿಕೊಂಡು ಮಗನನ್ನು ಸಾಕಿ ಸಲಹಿದೆ. ಮದುವೆಯನ್ನೂ ಮಾಡಿದೆ. ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಬಂತು ಯುದ್ಧ! ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಾಗಿತ್ತು. ಈ ವಿಷಯ ತಿಳಿದು ಅವನೆಷ್ಟು ಸಂಕಟ ಪಡುತ್ತಾನೋ..." ಕೊನೆಯ ಮಾತನ್ನು ಹೇಳುವಾಗ ಮುದುಕಿಯ ಕಂಠ ಗದ್ಗದವಾಗಿ ಮುಂದೆ ಮಾತೇ ಹೊರಡಲಿಲ್ಲ.**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

**ಮುದುಕಿಯು ನೆಮ್ಮದಿಯಿಂದ ಬದುಕಲು ಇದ್ದ ಆಧಾರವೇನು?** [1 mark]

**Solution:**

**Concept:**

- The question asks what support (ಆಧಾರ) the old woman had to live in peace.
- A one-sentence answer is needed.

**Step 1:** Find the lines in the passage In her first speech the old woman says: "ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು."
So the land and the property were enough for the family, and these were the base of their peaceful life.

**Step 2:** Write the answer in one sentence Model answer: ಜಮೀನು ಮತ್ತು ಆಸ್ತಿಯು ಮುದುಕಿಯು ನೆಮ್ಮದಿಯಿಂದ ಬದುಕಲು ಇದ್ದ ಆಧಾರವಾಗಿತ್ತು.
In English: The land and property were the support the old woman had for living in peace.

**Step 3:** Conclusion The old woman's support for a peaceful life was her land and property.

**Quick Tip to Solve:** Read the first speech of the old woman. The sentence after "ನೆಮ್ಮದಿಯಿಂದಲೇ ಇದ್ದೆವು" tells the reason.

**3(II). ಮುದುಕಿಯ ಮಾತಿನಂತೆ ಯುದ್ಧಕ್ಕೆ ಕಾರಣವೇನು?** [1 mark]

**Solution:**

**Concept:**

- We must say, in the old woman's words, what caused the war.

**Step 1:** Find the lines in the passage Rahil asks whether there was a war then too. The old woman replies: "ಅವರ ಧರ್ಮ ಬೇರೆ ನಮ್ಮ ಧರ್ಮ ಬೇರೆ ಎಂಬ ಕಾರಣಕ್ಕೆ ಆಗ ಯುದ್ಧ ಮಾಡಿದರು."
So the cause was the difference of religion between the two countries.

**Step 2:** Write the answer in one sentence Model answer: ಎರಡು ದೇಶದವರ ಧರ್ಮ ಬೇರೆಯಾಗಿರುವುದೇ ಯುದ್ಧಕ್ಕೆ ಕಾರಣವಾಗಿತ್ತು.
In English: The difference in the religions of the people of the two countries was the cause of the war.

**Step 3:** Conclusion The war was caused by the difference of religion.

**Quick Tip to Solve:** In the second speech, find the phrase that ends with ಎಂಬ ಕಾರಣಕ್ಕೆ.

**3(III). ಮುದುಕಿಯು ಏಕೆ ಶಪಿಸಿದಳು?** [1 mark]

**Solution:**

**Concept:**

- The question asks why the old woman cursed.
- We must find what made her angry.

**Step 1:** Find the lines in the passage She complains that people loot what the family earned by hard work. Then she says: "ಮನೆಯ ಮಕ್ಕಳನ್ನೂ ಯುದ್ಧಕ್ಕೆ ಕರೆದೊಯ್ಯುತ್ತಾರಲ್ಲಾ? ಇವರ ಮನೆ ಹಾಳಾಗ!" and strikes the ground.
The curse comes because the war takes away even the children of the house.

**Step 2:** Write the answer in one sentence Model answer: ಮನೆಯ ಮಕ್ಕಳನ್ನೂ ಯುದ್ಧಕ್ಕೆ ಕರೆದೊಯ್ಯುತ್ತಾರೆಂದು ಮುದುಕಿಯು ಶಪಿಸಿದಳು.
In English: She cursed because the war takes away even the sons of the house.

**Step 3:** Conclusion She cursed because children of the house are also taken to war.

**Quick Tip to Solve:** Find the curse (ಇವರ ಮನೆ ಹಾಳಾಗ) and read the question the old woman asks just before it.

**3(IV). ಪುಟ್ಟ ಮಗುವಿನ ಅಳು ಕೇಳಲು ಯಾರು ಕುತೂಹಲದಿಂದ ಕಾಯುತ್ತಿದ್ದಾರೆ ಎಂದು ಮುದುಕಿ ಹೇಳಿದಳು?**
[1 mark]

**Solution:**

**Concept:**

- We must name the person who was eagerly waiting to hear the cry of a newborn baby.

**Step 1:** Find the lines in the passage The old woman says: "ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು."
Her son, whose wife was expecting, stood on tiptoe waiting. Then the war came and he had to go.

**Step 2:** Write the answer in one sentence Model answer: ಪುಟ್ಟ ಮಗುವಿನ ಅಳು ಕೇಳಲು ಯುದ್ಧಕ್ಕೆ ಹೋದ ಮುದುಕಿಯ ಮಗನು ಕುತೂಹಲದಿಂದ ಕಾಯುತ್ತಿದ್ದಾನೆ ಎಂದು ಮುದುಕಿ ಹೇಳಿದಳು.
In English: The old woman said that her son, who had gone to war, was eagerly waiting to hear the cry of the baby.

**Step 3:** Conclusion The person waiting was the old woman's son who went to war.

**Quick Tip to Solve:** Search the last speech for the phrase ಪುಟ್ಟ ಮಗುವಿನ ಅಳು and see who is the subject of the sentence.

**3(V). ಮುದುಕಿಯ ಗಂಡ ಯುದ್ಧದಿಂದ ಹಿಂತಿರುಗದಿದ್ದಾಗ ಮಗನನ್ನು ಹೇಗೆ ಸಲಹಿದಳು?** [1 mark]

**Solution:**

**Concept:**

- The old woman's husband went to war and never came back.
- The question asks how she brought up her son after that.

**Step 1:** Find the lines in the passage She says: "ನನ್ನ ಮಗನಿನ್ನೂ ಚಿಕ್ಕ ಹುಡುಗನಾಗಿದ್ದಾಗ ಯುದ್ಧಕ್ಕೆ ಹೋದ ಅವನ ತಂದೆ ಹಿಂತಿರುಗಲಿಲ್ಲ... ಎಲ್ಲ ದುಃಖ ನುಂಗಿಕೊಂಡು ಮಗನನ್ನು ಸಾಕಿ ಸಲಹಿದೆ."
So she raised him by swallowing (bearing silently) all her sorrow.

**Step 2:** Write the answer in one sentence Model answer: ಎಲ್ಲ ದುಃಖ ನುಂಗಿಕೊಂಡು ಮುದುಕಿಯು ಮಗನನ್ನು ಸಾಕಿ ಸಲಹಿದಳು.
In English: She raised her son by bearing all her sorrow in silence.

**Step 3:** Conclusion She raised him by bearing all her grief silently.

**Quick Tip to Solve:** Read the lines about her husband who did not return. The next sentence tells how she raised her son.

**4(I). ಕೆಳಗೆ ಕೊಟ್ಟಿರುವ ಜಿ.ಎಸ್.ಶಿವರುದ್ರಪ್ಪ ಅವರು ಬರೆದಿರುವ 'ಸಂಕಲ್ಪಗೀತೆ' ಎಂಬ ಪರಿಚಿತ ಪದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**ಸಂಕಲ್ಪಗೀತೆ**

**ಸುತ್ತಲು ಕವಿಯುವ ಕತ್ತಲೆಯೊಳಗೆ**
**ಪ್ರೀತಿಯ ಹಣತೆಯ ಹಚ್ಚೋಣ.**
**ಬಿರುಗಾಳಿಗೆ ಹೊಯ್ದಾಡುವ ಹಡಗನು**
**ಎಚ್ಚರದಲಿ ಮುನ್ನಡೆಸೋಣ.**
**ಕಲುಷಿತವಾದೀ ನದೀಜಲಗಳಿಗೆ**
**ಮುಂಗಾರಿನ ಮಳೆಯಾಗೋಣ.**
**ಬರಡಾಗಿರುವೀ ಕಾಡುಮೇಡುಗಳ**
**ವಸಂತವಾಗುತ ಮುಟ್ಟೋಣ**
**ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ**
**ಹೊಸ ಭರವಸೆಗಳ ಕಟ್ಟೋಣ.**
**ಮನುಜರ ನಡುವಣ ಅಡ್ಡಗೋಡೆಗಳ**
**ಕೆಡವುತ ಸೇತುವೆಯಾಗೋಣ.**
**ಮತಗಳೆಲ್ಲವೂ ಪಥಗಳು ಎನ್ನುವ**
**ಹೊಸ ಎಚ್ಚರದೊಳು ಬದುಕೋಣ**
**ಭಯ-ಸಂಶಯದೊಳು ಕಂದಿದ ಕಣ್ಣೊಳು**
**ನಾಳಿನ ಕನಸನು ಬಿತ್ತೋಣ.**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

**ಸಂಸಾರವೆಂಬ ಸಾಗರದಲ್ಲಿ ಹಡಗನ್ನು ಏಕೆ ಎಚ್ಚರಿಕೆಯಿಂದ ನಡೆಸಬೇಕು?** [1 mark]

**Solution:**

**Concept:**

- The poet speaks of a ship in the sea of worldly life (ಸಂಸಾರ).
- The question asks why it must be steered carefully.

**Step 1:** Find the lines in the poem The lines are: "ಬಿರುಗಾಳಿಗೆ ಹೊಯ್ದಾಡುವ ಹಡಗನು / ಎಚ್ಚರದಲಿ ಮುನ್ನಡೆಸೋಣ."
The ship is tossed about by the storm. If it is not steered with care, it may be caught in the storm and sink.

**Step 2:** Write the answer in one sentence Model answer: ಸಂಸಾರವೆಂಬ ಸಾಗರದಲ್ಲಿ ಹಡಗು ಬಿರುಗಾಳಿಗೆ ಸಿಲುಕಿ ಮುಳುಗಬಹುದೆಂದು ಎಚ್ಚರಿಕೆಯಿಂದ ನಡೆಸಬೇಕು.
In English: In the sea of life the ship may be caught in the storm and sink, so it must be steered with care. The ship stands for the human life.

**Step 3:** Conclusion A ship in a storm can sink, so it must be steered with care.

**Quick Tip to Solve:** Read the lines about the ship that is tossed by the storm. What can happen to it?

### 4(II). ಬರಡಾಗಿರುವ ಕಾಡುಮೇಡುಗಳು ಚಿಗುರಲು ಯಾವ ಕಾಲ ಬರಬೇಕು? [1 mark]

**Solution:**

**Concept:**

- The question asks which season must come for the dry forests and fields to sprout again.

**Step 1:** Find the lines in the poem The lines are: "ಬರಡಾಗಿರುವೀ ಕಾಡುಮೇಡುಗಳ / ವಸಂತವಾಗುತ ಮುಟ್ಟೋಣ" (let us touch the barren forests and fields as spring).
Spring (ವಸಂತ) is the season of new leaves, so it brings life back to dry land.

**Step 2:** Write the answer in one sentence Model answer: ಬರಡಾಗಿರುವ ಕಾಡುಮೇಡುಗಳು ಚಿಗುರಲು ವಸಂತ ಕಾಲ ಬರಬೇಕು.
In English: Spring must come for the dry forests and fields to sprout.

**Step 3:** Conclusion Spring is the season that revives the dry land.

**Quick Tip to Solve:** The second stanza pairs a rain with the rivers and a season with the forests.

### 4(III). ಆಸೆಯನ್ನು ಕಳೆದುಕೊಂಡವರ ಜೀವನದಲ್ಲಿ ಏನನ್ನು ಮೂಡಿಸಬೇಕು? [1 mark]

**Solution:**

**Concept:**

- The question asks what should be created in the lives of people who have lost hope.

**Step 1:** Find the lines in the poem The third stanza says: "ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ / ಹೊಸ ಭರವಸೆಗಳ ಕಟ್ಟೋಣ."
Those who have fallen (lost hope) should be lifted up and given new hopes (ಭರವಸೆ).

**Step 2:** Write the answer in one sentence Model answer: ಆಸೆಯನ್ನು ಕಳೆದುಕೊಂಡವರ ಜೀವನದಲ್ಲಿ ಹೊಸ ಭರವಸೆಯನ್ನು ಮೂಡಿಸಬೇಕು.
In English: We must build new hope in the lives of those who have lost hope.

**Step 3:** Conclusion New hope must be built in their lives.

**Quick Tip to Solve:** The third stanza begins with those who have fallen. What are we asked to build for them?

**4(IV). ನಾವು ಯಾವ ಎಚ್ಚರದಲಿ ಬದುಕಬೇಕು?** [1 mark]

**Solution:**

**Concept:**

- The question asks with what kind of awareness we should live.

**Step 1:** Find the lines in the poem The last stanza says: "ಮತಗಳೆಲ್ಲವೂ ಪಥಗಳು ಎನ್ನುವ / ಹೊಸ ಎಚ್ಚರದೊಳು ಬದುಕೋಣ".
It means that all religions are only different paths, and we should live with this new awareness.

**Step 2:** Write the answer in one sentence Model answer: ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದಲಿ ಬದುಕಬೇಕು.
In English: We must live with the new awareness that all religions are paths.

**Step 3:** Conclusion We should live with the awareness that all faiths are paths.

**Quick Tip to Solve:** The last stanza starts with ಮತಗಳೆಲ್ಲವೂ. Complete the thought with the phrase that follows.

**4(V). ನಾವು ಯಾವ ಸಂಕಲ್ಪ ಕೈಗೊಳ್ಳಬೇಕು?** [1 mark]

**Solution:**

**Concept:**

- The question asks which resolve (ಸಂಕಲ್ಪ) we should take, which is the theme of the whole poem.

**Step 1:** Find the lines in the poem The poem ends with: "ಭಯ-ಸಂಶಯದೊಳು ಕಂದಿದ ಕಣ್ಣೊಳು / ನಾಳಿನ ಕನಸನು ಬಿತ್ತೋಣ."
That is, in the eyes that have dimmed with fear and doubt, let us sow the dream of tomorrow.

**Step 2:** Write the answer in one sentence Model answer: ನಾಳಿನ ಕನಸನ್ನು ಬಿತ್ತುವ ದೃಢಸಂಕಲ್ಪ ಕೈಗೊಳ್ಳಬೇಕು.
In English: We must resolve firmly to sow the dream of a better tomorrow in people.

**Step 3:** Conclusion The resolve is to sow the dream of tomorrow.

**Quick Tip to Solve:** Read the last two lines of the poem. They state the resolve.

## PART – 1 · SECTION -B (20 marks)

*(ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ) = 20 ಅಂಕಗಳು.*

**5(I). ಕೆಳಗಿನ ಪ್ರತಿಯೊಂದು ಬಹುಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.**
**ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಕರ್ಮಧಾರಯ ಸಮಾಸ ಪದವಿರುವ ವಾಕ್ಯ ಇದಾಗಿದೆ.** [1 mark]

(A) ಅಲ್ಲಿ **ಹಿರಿದಾದ ತೊರೆಯು** ಹರಿಯುತ್ತಿತ್ತು.

(B) ಬಸವನು **ಕಾಲಿನ ಬಳೆ**ಗಳನ್ನು ತಂದನು.

(C) ಕೊಡಗಿನ ಜನರು **ಕೆರೆ, ಕಟ್ಟೆ ಮತ್ತು ಬಾವಿ**ಗಳ ಸೌಲಭ್ಯವನ್ನು ಪಡೆದಿದ್ದಾರೆ.

(D) ಮನುಷ್ಯನಿಗೆ **ಪಂಚೇಂದ್ರಿಯ**ಗಳು ಬಹಳ ಮುಖ್ಯವಾಗಿವೆ.

**Correct Answer:** (A) ಅಲ್ಲಿ **ಹಿರಿದಾದ ತೊರೆಯು** ಹರಿಯುತ್ತಿತ್ತು.

**Solution:**

**Concept:**

- A karmadharaya samasa (ಕರ್ಮಧಾರಯ ಸಮಾಸ) is a compound in which the first word describes the second, and both words are in the same case.
- A common pattern is adjective + noun, for example ಹಿರಿದು + ತೊರೆ = ಹಿರಿದಾದ ತೊರೆ (a big stream).

**Step 1:** Test each option (A) ಹಿರಿದಾದ ತೊರೆಯು: ಹಿರಿದಾದ (big) describes ತೊರೆ (stream). Quality word + noun, so this is karmadharaya. It is TRUE.
(B) ಕಾಲಿನ ಬಳೆ: this means the bangle of the leg. The first word shows a relation (ಕಾಲಿನ, of the leg), so this is a tatpurusha compound. FALSE.
(C) ಕೆರೆ, ಕಟ್ಟೆ ಮತ್ತು ಬಾವಿ: three nouns joined with equal weight (the lake and the tank and the well). This is a dvandva compound. FALSE.
(D) ಪಂಚೇಂದ್ರಿಯ: ಪಂಚ (five) is a number word joined with ಇಂದ್ರಿಯ. This is a dvigu compound. FALSE.

**Step 2:** Conclusion Only option (A) has a quality word joined to a noun, so the answer is (A).

**Quick Tip to Solve:** Karmadharaya joins a describing word (adjective) with a noun. Find the pair where the first word tells the quality of the second.

**5(II). ಭೀಮನು ತನ್ನ (ಬಲಗಾಲು) ಚೆಂಡನ್ನು ಒದೆದನು. ಈ ವಾಕ್ಯದಲ್ಲಿ ತೃತೀಯ ವಿಭಕ್ತಿ ಪ್ರತ್ಯಯದಲ್ಲಿ ಹೀಗೆ ಆಗುತ್ತದೆ.** [1 mark]

(A) ಬಲಗಾಲಿಗೆ

(B) ಬಲಗಾಲನ್ನು

(C) ಬಲಗಾಲಿನಲ್ಲಿ

(D) ಬಲಗಾಲಿನಿಂದ

**Correct Answer:** (D) ಬಲಗಾಲಿನಿಂದ

**Solution:**

**Concept:**

- Kannada has seven vibhakti (case) endings.
- The third case (ತೃತೀಯ ವಿಭಕ್ತಿ) uses the suffix ಇಂದ / ಇನಿಂದ and shows the tool or means by which an act is done.

**Step 1:** Apply it The sentence means Bhima kicked the ball with his right leg. The leg is the tool of the kick.
Adding the suffix to ಬಲಗಾಲು gives ಬಲಗಾಲಿನಿಂದ. The sentence becomes: ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆದನು.

**Step 2:** Why the other options are wrong (A) ಬಲಗಾಲಿಗೆ has the suffix ಗೆ, the fourth case (to, for).
(B) ಬಲಗಾಲನ್ನು has the suffix ಅನ್ನು, the second case (object).
(C) ಬಲಗಾಲಿನಲ್ಲಿ has the suffix ಅಲ್ಲಿ, the seventh case (in, at).

**Step 3:** Conclusion The third case form is ಬಲಗಾಲಿನಿಂದ, which is option (D).

**Quick Tip to Solve:** The third case ending is ಇಂದ. It shows the instrument with which the action is done.

**5(III). ಇವುಗಳಲ್ಲಿ ಜೋಡಿಪದ ಇರುವ ವ್ಯಾಕರಣಾಂಶವನ್ನು ಹೊಂದಿರುವ ವಾಕ್ಯ** [1 mark]

(A) ಮಳೆಯು ಮಳೆಗಾಲದಲ್ಲಿ ರಪರಪ ಬಿದ್ದಿತು.

(B) ಹಬ್ಬದ ಭಕ್ಷ್ಯ-ಭೋಜ್ಯಗಳನ್ನು ವಿತರಣೆ ಮಾಡುವ ಸಂಪ್ರದಾಯವಿತ್ತು.

(C) ಹಕ್ಕಿಗಳು ಮಳೆ ಬಂದಾಗ ಗಡಗಡ ನಡುಗಲು ಶುರು ಮಾಡುತ್ತಿದ್ದವು.

(D) ಮಕ್ಕಳಿಗೂ ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು.

**Correct Answer:** (B) ಹಬ್ಬದ ಭಕ್ಷ್ಯ-ಭೋಜ್ಯಗಳನ್ನು ವಿತರಣೆ ಮಾಡುವ ಸಂಪ್ರದಾಯವಿತ್ತು.

**Solution:**

**Concept:**

- A jodipada (ಜೋಡಿಪದ) is a pair of two different words with related meanings used together, such as ಅಕ್ಕ-ತಂಗಿ or ಭಕ್ಷ್ಯ-ಭೋಜ್ಯ.
- The two parts are not the same word repeated.

**Step 1:** Test each option (A) ರಪರಪ is the same sound repeated, an imitative word (ಅನುಕರಣಾವ್ಯಯ). Not a jodipada.
(B) ಭಕ್ಷ್ಯ-ಭೋಜ್ಯ joins two different words that both mean kinds of food. This is a jodipada.
(C) ಗಡಗಡ is again a repeated imitative sound. Not a jodipada.
(D) ಒಂದೊಂದು is the repetition of ಒಂದು (a doubled word, dvirukti). Not a jodipada.

**Step 2:** Conclusion Option (B) is the only one with two different paired words, so it is correct.

**Quick Tip to Solve:** A jodipada is a pair of two different words with related meaning. A word simply said twice is not a jodipada.

**5(IV). ನೀನು, ನೀವು : ಮಧ್ಯಮ ಪುರುಷ ಸರ್ವನಾಮ : ನಾನು, ನಾವು :** [1 mark]

(A) ಪ್ರಥಮ ಪುರುಷ ಸರ್ವನಾಮ

(B) ಉತ್ತಮ ಪುರುಷ ಸರ್ವನಾಮ

(C) ಪ್ರಶ್ನಾರ್ಥಕ ಸರ್ವನಾಮ

(D) ಆತ್ಮಾರ್ಥಕ ಸರ್ವನಾಮ

**Correct Answer:** (B) ಉತ್ತಮ ಪುರುಷ ಸರ್ವನಾಮ

**Solution:**

**Concept:**

- This is an analogy. The first pair of words has a class name, and the second pair must get its own class name in the same way.
- Kannada personal pronouns are of three kinds: ಉತ್ತಮ ಪುರುಷ (first person: the speaker), ಮಧ್ಯಮ ಪುರುಷ (second person: the one spoken to) and ಪ್ರಥಮ ಪುರುಷ (third person: the one spoken about).

**Step 1:** Apply it ನೀನು and ನೀವು address the listener, so they are ಮಧ್ಯಮ ಪುರುಷ (second person), as the question says.
ನಾನು and ನಾವು are said by the speaker about himself, so they are ಉತ್ತಮ ಪುರುಷ (first person).

**Step 2:** Why the other options are wrong (A) ಪ್ರಥಮ ಪುರುಷ covers words like ಅವನು, ಅವಳು, ಅವರು (he, she, they).
(C) ಪ್ರಶ್ನಾರ್ಥಕ covers question words like ಯಾರು, ಏನು.
(D) ಆತ್ಮಾರ್ಥಕ covers the reflexive word ತಾನು (self).

**Step 3:** Conclusion ನಾನು, ನಾವು are first person pronouns, so the answer is (B) ಉತ್ತಮ ಪುರುಷ

ಸರ್ವನಾಮ.

**Quick Tip to Solve:** ನೀನು is second person (ಮಧ್ಯಮ). ನಾನು is the speaker's own word. Which person is that?

**5(IX). ಕೆಳಗೆ ಕೊಟ್ಟಿರುವ ತತ್ಸಮ- ತದ್ಭವಗಳ ಸರಿಯಾದ ರೂಪವನ್ನು ಗುರುತಿಸಿ ಬರೆಯಿರಿ.**
**1. ಪ್ರಸಾದ - ಹಸಾದ**
**2. ಅಕ್ಷರ - ಸಕ್ಕರೆ**
**3. ಚೀರ - ಸೀರೆ**
**4. ವಂಧ್ಯಾ - ಸಂಜೆ**
**ಸರಿಯಾದ ಉತ್ತರಗಳನ್ನು ಗುರುತಿಸಿ.** [1 mark]

(A) 1 ಮತ್ತು 2

(B) 2 ಮತ್ತು 3

(C) 3 ಮತ್ತು 4

(D) 1 ಮತ್ತು 3

**Correct Answer:** (D) 1 ಮತ್ತು 3

**Solution:**

**Concept:**

- A tatsama word is a Sanskrit word used in Kannada without change.
- A tadbhava word is the Kannada form that grew out of it.
- We must check which pairs are correct.

**Step 1:** Check each pair 1. ಪ್ರಸಾದ - ಹಸಾದ: ಪ್ರಸಾದ became ಹಸಾದ in Kannada. This pair is CORRECT.
2. ಅಕ್ಷರ - ಸಕ್ಕರೆ: the tadbhava of ಅಕ್ಷರ is ಅಕ್ಕರ. ಸಕ್ಕರೆ comes from ಶರ್ಕರಾ, so this pair is WRONG.
3. ಚೀರ - ಸೀರೆ: ಚೀರ became ಸೀರೆ. This pair is CORRECT.
4. ವಂಧ್ಯಾ - ಸಂಜೆ: ಸಂಜೆ is the tadbhava of ಸಂಧ್ಯಾ (evening), not ವಂಧ್ಯಾ. The pair is WRONG.

**Step 2:** Pick the option Pairs 1 and 3 are correct, which is option (D). The other options contain pair 2 or pair 4, which are wrong.

**Step 3:** Conclusion Pairs 1 and 3 are correct, so the answer is (D).

**Quick Tip to Solve:** Check meaning and sound change in each pair. Two of the four pairs are not related as tatsama and tadbhava.

**5(V). ಅಹುದು ದಿಟ ಚಿತ್ರಕೂಟವೆ ಮನಕೆ ಬಹುದು - ಈ ವಾಕ್ಯದಲ್ಲಿರುವ ದಿಟ ಪದದ ವಿರುದ್ಧ ಪದ** [1 mark]

(A) ಸಟೆ

(B) ಅದಿಟ

(C) ನಿರ್ದಿಟ

(D) ನಿಜ

**Correct Answer:** (A) ಸಟೆ

**Solution:**

**Concept:**

- ದಿಟ means true or real.

- We need its opposite word (antonym), which means false.

**Step 1:** Check the options (A) ಸಟೆ means a lie, or false. This is the opposite of ದಿಟ.
(B) ಅದಿಟ and (C) ನಿರ್ದಿಟ are not real Kannada words. They are made only by adding a prefix to ದಿಟ.
(D) ನಿಜ means true. It has the same meaning as ದಿಟ, so it is a synonym, not an opposite.

**Step 2:** Conclusion The opposite of ದಿಟ (true) is ಸಟೆ (false), so the answer is (A).

**Quick Tip to Solve:** ದಿಟ and ನಿಜ mean the same thing. Look for the word that means false.

**5(VI). ಈ ಕೆಳಗಿನ ವಾಕ್ಯಗಳಲ್ಲಿ ಸರಿಯಾದ ಅರ್ಥವನ್ನು ನೀಡುವ ವಾಕ್ಯವನ್ನು ಗುರುತಿಸಿ.** [1 mark]

(A) ರಾಷ್ಟ್ರಪತಿಗಳು ಪ್ರಶಸ್ತಿಯನ್ನು **ಪ್ರಧಾನ** ಮಾಡಿದರು.

(B) ರಾಷ್ಟ್ರಪತಿಗಳು ಪ್ರಶಸ್ತಿಯನ್ನು **ಪ್ರಾದಾನ** ಮಾಡಿದರು.

(C) ರಾಷ್ಟ್ರಪತಿಗಳು ಪ್ರಶಸ್ತಿಯನ್ನು **ಪ್ರದಾನ** ಮಾಡಿದರು.

(D) ರಾಷ್ಟ್ರಪತಿಗಳು ಪ್ರಶಸ್ತಿಯನ್ನು **ಪ್ರಾಧಾನ್ಯತೆ** ಮಾಡಿದರು.

**Correct Answer:** (C) ರಾಷ್ಟ್ರಪತಿಗಳು ಪ್ರಶಸ್ತಿಯನ್ನು **ಪ್ರದಾನ** ಮಾಡಿದರು.

**Solution:**

**Concept:**

- All four sentences are the same except for one word.
- We must pick the word that gives the right meaning for the act of giving an award.

**Step 1:** Know the words ಪ್ರದಾನ means giving or presenting. So ಪ್ರಶಸ್ತಿಯನ್ನು ಪ್ರದಾನ ಮಾಡಿದರು means presented the award.
ಪ್ರಧಾನ means chief or main, as in ಪ್ರಧಾನಮಂತ್ರಿ (prime minister).

**Step 2:** Check the options (A) ಪ್ರಧಾನ means chief. It is not about giving, so it does not fit.
(B) ಪ್ರಾದಾನ is a wrong spelling. No such word exists.
(C) ಪ್ರದಾನ means giving. It fits the sentence.
(D) ಪ್ರಾಧಾನ್ಯತೆ means importance, so presented the importance does not make sense.

**Step 3:** Conclusion The right word for giving an award is ಪ್ರದಾನ, which is option (C).

**Quick Tip to Solve:** Which word means to give or to present: ಪ್ರದಾನ or ಪ್ರಧಾನ?

**5(VII). ಮುದುಕಿ ಮತ್ತು ಸೊಸೆಯ ರೋದನ ಮನೆಯ ಮೂಲೆ ಮೂಲೆಗಳಲ್ಲೂ ಪ್ರತಿಧ್ವನಿಸಿತು. - ಈ ವಾಕ್ಯದಲ್ಲಿರುವ ರೋದನ ಪದದ ಅರ್ಥ** [1 mark]

(A) ಕೋಪ

(B) ಅಳುವಿಕೆ

(C) ಸಮಾಧಾನ

(D) ಸಂತೋಷ

**Correct Answer:** (B) ಅಳುವಿಕೆ

**Solution:**

**Concept:**

- We must give the meaning of the word ರೋದನ as it is used in the sentence.

**Step 1:** Use the meaning and the context ರೋದನ means weeping or crying aloud. In the sentence,

the cry of the old woman and her daughter-in-law echoed in every corner of the house, which fits crying.
ಅಳುವಿಕೆ means crying, so (B) is correct.

**Step 2:** Why the other options are wrong (A) ಕೋಪ means anger. Anger does not echo in the same way as crying.
(C) ಸಮಾಧಾನ means peace or comfort, which is the opposite of the mood here.
(D) ಸಂತೋಷ means joy, which does not fit two women who are grieving.

**Step 3:** Conclusion ರೋದನ means crying, so the answer is (B) ಅಳುವಿಕೆ.

**Quick Tip to Solve:** ರೋದನ is a word for loud weeping. Think of the mood of the sentence.

**5(VIII). ಮಧುರಾ ನಗರದಲ್ಲಿ ಧರ್ಮಬುದ್ಧಿಯೂ ದುಷ್ಟಬುದ್ಧಿಯೂ ಎಂಬ ಇಬ್ಬರು ವ್ಯಾಪಾರಿಗಳು ಒಟ್ಟಿಗೆ ವ್ಯಾಪಾರಕ್ಕಾಗಿ ಹೋಗಿ ಬಹಳ ಹೊನ್ನನ್ನು ಪಡೆದು ಹಿಂದುರುಗಿ ಬಂದು ಜನ್ಮಭೂಮಿಯಾದ ಮಧುರಾಪುರದ ಬಹಿರುದ್ಯಾನದಲ್ಲಿ ಬೀಡುಬಿಟ್ಟರು. ಅರ್ಧ ರಾತ್ರಿಯ ಸಮಯ ಧರ್ಮಬುದ್ಧಿಯು ದುರ್ಬುದ್ಧಿಯಾದ ದುಷ್ಟಬುದ್ಧಿಯನ ಕರೆದು ಹೊನ್ನನ್ನು ಪಾಲು ಮಾಡಿಕೊಳ್ಳೋಣ - ಮೇಲಿನ ವಾಕ್ಯವೃಂದದಲ್ಲಿ ಮಧುರಾ ಮತ್ತು ವ್ಯಾಪಾರಿ ಈ ಪದಗಳು ನಾಮಪದಗಳಾಗಿವೆ.** [1 mark]

(A) ರೂಢನಾಮ ಮತ್ತು ಅಂಕಿತನಾಮ

(B) ಅಂಕಿತನಾಮ ಮತ್ತು ಸರ್ವನಾಮ

(C) ಅಂಕಿತನಾಮ ಮತ್ತು ಅನ್ವರ್ಥನಾಮ

(D) ಸರ್ವನಾಮ ಮತ್ತು ರೂಢನಾಮ

**Correct Answer:** (C) ಅಂಕಿತನಾಮ ಮತ್ತು ಅನ್ವರ್ಥನಾಮ

**Solution:**

**Concept:**

- Nouns (ನಾಮಪದ) in Kannada are of three main kinds. ರೂಢನಾಮ is a common name given by tradition (ಮನೆ, ಹಸು). ಅಂಕಿತನಾಮ is the name of a particular person or place (ರಾಮ, ಮಧುರಾ). ಅನ್ವರ್ಥನಾಮ is a name that comes from a quality or a work (ವ್ಯಾಪಾರಿ, one who does trade).

**Step 1:** Classify the two words ಮಧುರಾ is the name of a particular city, so it is ಅಂಕಿತನಾಮ.
ವ್ಯಾಪಾರಿ is a name derived from the work of the person (ವ್ಯಾಪಾರ, trade), so it is ಅನ್ವರ್ಥನಾಮ.

**Step 2:** Why the other options are wrong (A) says ಮಧುರಾ is ರೂಢನಾಮ. It is a particular place, so this is wrong.
(B) says ವ್ಯಾಪಾರಿ is ಸರ್ವನಾಮ (a pronoun). It is a noun, so this is wrong.
(D) calls both words pronoun and common noun, which is wrong for both.

**Step 3:** Conclusion ಮಧುರಾ is ಅಂಕಿತನಾಮ and ವ್ಯಾಪಾರಿ is ಅನ್ವರ್ಥನಾಮ, so the answer is (C).

**Quick Tip to Solve:** ಮಧುರಾ names a particular city. ವ್ಯಾಪಾರಿ takes its meaning from the work of trade.

**5(X). ಹುಲಿಯು ಬಂಡೆಗಳ ಮರೆಯಲ್ಲೇ ನಡೆಯುತ್ತಿದ್ದಾಗ ಇದ್ದಕ್ಕಿದ್ದ ಹಾಗೆಯೇ ಮಧುರವಾದ ಗಂಧವೊಂದು ಅದರ ಘ್ರಾಣೇಂದ್ರಿಯವನ್ನು ಆಕ್ರಮಿಸಿತು. - ಈ ವಾಕ್ಯದಲ್ಲಿರುವ ಘ್ರಾಣೇಂದ್ರಿಯ ಪದವು ಸಂಧಿಯಾಗಿದೆ.**

[1 mark]

(A) ಗುಣಸಂಧಿ

(B) ಯಣ್ ಸಂಧಿ

(C) ಲೋಪಸಂಧಿ

(D) ಆದೇಶ ಸಂಧಿ

**Correct Answer:** (A) ಗುಣಸಂಧಿ

**Solution:**

**Concept:**

- Sandhi is the joining of two words.
- In Sanskrit sandhi, ಗುಣಸಂಧಿ happens when ಅ or ಆ meets ಇ or ಈ and the two vowels become ಏ. (Likewise ಅ/ಆ + ಉ/ಊ gives ಓ, and ಅ/ಆ + ಋ gives ಅರ್.)

**Step 1:** Split the word ಘ್ರಾಣೇಂದ್ರಿಯ = ಘ್ರಾಣ + ಇಂದ್ರಿಯ.
The last vowel sound of ಘ್ರಾಣ is ಅ (the vowel carried by ಣ). The first vowel of ಇಂದ್ರಿಯ is ಇ. ಅ + ಇ = ಏ, so the word becomes ಘ್ರಾಣೇಂದ್ರಿಯ.
This rule is the ಗುಣಸಂಧಿ.

**Step 2:** Why the other options are wrong (B) ಯಣ್ ಸಂಧಿ turns ಇ, ಉ, ಋ into ಯ, ವ, ರ before a different vowel (example: ಅತಿ + ಅಂತ = ಅತ್ಯಂತ). That does not happen here.
(C) ಲೋಪಸಂಧಿ drops a vowel, but here a new vowel ಏ appears.
(D) ಆದೇಶ ಸಂಧಿ is a Kannada sandhi in which a consonant is replaced (example: ಕ to ಗ). It does not apply to this Sanskrit pair.

**Step 3:** Conclusion ಘ್ರಾಣ + ಇಂದ್ರಿಯ gives ಏ by the ಗುಣಸಂಧಿ rule, so the answer is (A).

**Quick Tip to Solve:** Split ಘ್ರಾಣೇಂದ್ರಿಯ into ಘ್ರಾಣ + ಇಂದ್ರಿಯ and see which vowels meet and what they become.

**6(I). ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ.**

**ಮುಂಗಾರು ಮಾರುತಗಳು ನೈರುತ್ಯ ದಿಕ್ಕಿನಿಂದ ರಭಸವಾಗಿ ಬೀಸಿದವು- ಈ ವಾಕ್ಯವನ್ನು ಭವಿಷ್ಯತ್ ಕಾಲದಲ್ಲಿ ಬರೆಯಿರಿ.** [1 mark]

**Solution:**

**Concept:**

- The sentence is in the past tense (ಭೂತಕಾಲ): ಬೀಸಿದವು (blew).
- We must write it in the future tense (ಭವಿಷ್ಯತ್ ಕಾಲ), which means will blow.

**Step 1:** Know the rule In Kannada only the verb changes with tense. The root here is ಬೀಸು (blow).
Past: ಬೀಸು + ಇದ + ಅವು = ಬೀಸಿದವು. Future: ಬೀಸು + ವ + ಅವು = ಬೀಸುವವು.
The subject ಮಾರುತಗಳು is plural and neuter, so the ending stays ಅವು.

**Step 2:** Rewrite the sentence Keep every other word as it is and change only the verb.
Answer: ಮುಂಗಾರು ಮಾರುತಗಳು ನೈರುತ್ಯ ದಿಕ್ಕಿನಿಂದ ರಭಸವಾಗಿ ಬೀಸುವವು.
In English: The monsoon winds will blow forcefully from the south-west.

**Step 3:** Conclusion The future tense sentence is given above; only the verb changes to ಬೀಸುವವು.

**Quick Tip to Solve:** Change only the verb. The past marker ಇದ becomes the future marker ಉವ.

**6(II). ಮಕ್ಕಳು ಚಿತ್ರವನ್ನು ಸುಂದರವಾಗಿ ಬಿಡಿಸಿದರು. - ಈ ವಾಕ್ಯವನ್ನು ಕರ್ಮಣಿ ಪ್ರಯೋಗದಲ್ಲಿ ಬರೆಯಿರಿ.**

[1 mark]

**Solution:**

**Concept:**

- The given sentence is in the kartari prayoga (active voice): the doer ಮಕ್ಕಳು is the subject.
- We must change it to the karmani prayoga (passive voice), where the object becomes the subject.

**Step 1:** Know the rule 1. The object ಚಿತ್ರವನ್ನು becomes the subject: ಚಿತ್ರವು.
2. The doer takes the third case ending ಇಂದ: ಮಕ್ಕಳು becomes ಮಕ್ಕಳಿಂದ.
3. The verb takes the passive form with ಲ್ಪಡು and agrees with the new subject. ಬಿಡಿಸಿದರು becomes ಬಿಡಿಸಲ್ಪಟ್ಟಿತು (past, neuter singular, as ಚಿತ್ರ is singular and neuter).

**Step 2:** Write the sentence Answer: ಚಿತ್ರವು ಮಕ್ಕಳಿಂದ ಸುಂದರವಾಗಿ ಬಿಡಿಸಲ್ಪಟ್ಟಿತು.
In English: The picture was drawn beautifully by the children.

**Step 3:** Conclusion The karmani form is given above.

**Quick Tip to Solve:** In the passive voice the object becomes the subject, the doer takes ಇಂದ, and the verb takes ಲ್ಪಡು.

**6(III). ನಿರುದ್ಯೋಗ ಸಮಸ್ಯೆಯಿಂದ ದೇಶದ ಪ್ರಗತಿಗೆ ಧಕ್ಕೆಯಾಗುವುದು. - ಈ ವಾಕ್ಯವನ್ನು ಸಂಭಾವನಾರ್ಥಕ ರೂಪದಲ್ಲಿ ಬರೆಯಿರಿ.**

[1 mark]

**Solution:**

**Concept:**

- The sentence is a plain statement of the future.
- We must rewrite it in the sambhavanarthaka form (the mood of possibility), which says that something may happen.

**Step 1:** Know the rule The possibility mood is made by changing the verb ending to ಈತು, for example ಬರುವುದು becomes ಬಂದೀತು and ಆಗುವುದು becomes ಆದೀತು.
Here the verb is ಧಕ್ಕೆಯಾಗುವುದು, so it becomes ಧಕ್ಕೆಯಾದೀತು.

**Step 2:** Write the sentence Answer: ನಿರುದ್ಯೋಗ ಸಮಸ್ಯೆಯಿಂದ ದೇಶದ ಪ್ರಗತಿಗೆ ಧಕ್ಕೆಯಾದೀತು.
In English: The progress of the country may be harmed by the problem of unemployment.

**Step 3:** Conclusion The possibility form is given above.

**Quick Tip to Solve:** The possibility mood ends in ಈತು, for example ಆದೀತು. Change only the verb.

**6(IV)(A). ಈ ಕೆಳಗಿನ ಗಾದೆಯ ಮಾತಿನ ಅರ್ಥವನ್ನು ಬರೆಯಿರಿ.**
**'ಕುಡಿದ ನೀರು ಅಲುಗದ ಹಾಗೆ'** [1 mark]

**Solution:**

**Concept:**

- A proverb (ಗಾದೆ) has a hidden meaning.
- We must explain what the saying means in life.

**Step 1:** Read the picture in the proverb ಕುಡಿದ ನೀರು ಅಲುಗದ ಹಾಗೆ means like drinking water that does not even shake. When we drink water it goes down smoothly without any shaking or trouble.

**Step 2:** State the meaning The meaning is that a work is finished easily, safely and without any trouble, or a place is reached without any difficulty.
Answer: ಯಾವುದೇ ತೊಂದರೆ ಇಲ್ಲದೆ, ಸುಲಭವಾಗಿ, ಸುರಕ್ಷಿತವಾಗಿ ಒಂದು ಕೆಲಸ ಮುಗಿದುಹೋಗುವುದು ಅಥವಾ ಒಂದು ಸ್ಥಳವನ್ನು ತಲುಪುವುದು.
The marking scheme says any answer that gives this sense is accepted.

**Step 3:** Conclusion The proverb means doing a task or reaching a place smoothly and safely.

**Quick Tip to Solve:** Picture drinking water: it goes down without any trouble. Apply the same idea to work.

OR

**6(IV)(B). ಈ ಕೆಳಗಿನ ಗಾದೆಯ ಮಾತಿನ ಅರ್ಥವನ್ನು ಬರೆಯಿರಿ.**
**'ತಾಳಿದವನು ಬಾಳಿಯಾನು'** [1 mark]

**Solution:**

**Concept:**

- This is the second proverb offered as an alternative.
- We must give its meaning.

**Step 1:** Read the words ತಾಳಿದವನು = one who has patience (who endured). ಬಾಳಿಯಾನು = will live well (will prosper).

**Step 2:** State the meaning One who stays patient and calm during troubles and obstacles will live well for a long time.
